**ದಿನಾಂಕ 20.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ SSP ವಕೀಲರಿಂದ</u>**

ವಿಜಯಲಕ್ಷ್ಮಿ 1972 ರಲ್ಲಿ ದೇವದುರ್ಗದಲ್ಲಿ ನರ್ಸ ಎಂದು ಸರಕಾರಿ ಆಸ್ಪತ್ರೆಯಲ್ಲಿ ನೇಮಕಗೊಂಡಿರುತ್ತಾಳೆ. ವಿಜಯಲಕ್ಷ್ಮಿ ಸ್ವಂತ ಊರು ದಾಂಡೇಲಿ ಆಗಿರುತ್ತದೆ. ವಿಜಯಲಕ್ಷ್ಮಿ ತಂದೆ ಹೆಸರು ಯಶವಂತರಾವ್ ಆಗಿರುತ್ತದೆ. 1972 ರಲ್ಲಿ ನನ್ನ ವಯಸ್ಸು 12 ವರ್ಷ ಇತ್ತು. 1972 ರಲ್ಲಿ ನಾವು ದೇವದುರ್ಗದಲ್ಲಿ ಇದ್ದೆವು. ನಾನು ದಾಂಡೇಲಿಯಲ್ಲಿ 4 ರಿಂದ 7 ನೇ ತರಗತಿವರೆಗ ವಿಧ್ಯಾಭ್ಯಾಸ ಮಾಡಿರುತ್ತೇನೆ. ಅ ಸಮಯದಲ್ಲಿ ನನಗೆ 13 ವರ್ಷ ವಯಸ್ಸು ಇತ್ತು. ವಿಜಯಲಕ್ಷ್ಮಿ ಕೊಪ್ಪರ ಗ್ರಾಮದಲ್ಲಿ ಕರ್ತವ್ಯ ಇದ್ದು ಅದೇ ಗ್ರಾಮದಲ್ಲಿ ವಾಸವಿದ್ದರು. ಅದೇ ಗ್ರಾಮದ ಯಾರ ಮನೆಯಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಗಳಲ್ಲಿ ವಿಜಯಲಕ್ಷ್ಮಿ ಬಾಡಿಗೆದಾರಳಾಗಿ ಇರಲಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತು. ವಿಜಯಲಕ್ಷ್ಮಿಯನ್ನು 1973 ರಲ್ಲಿ ತೇಜರಾಜ ಇವರು ಮದುವೆ ಮಾಡಿಕೊಂಡಿರುತ್ತಾರೆ. ಅ ಕುರಿತು ದಾಖಲಾತಿಗಳು ಇರುವುದಿಲ್ಲ ಸಾಕ್ಷಿ ಮುಂದುವರೆದು ಗಡ್ಡೆಗೂಳಿ ಬಸವೇಶ್ವರ ಗುಡಿಯಲ್ಲಿ ಮದುವೆ ಆಗಿರುತ್ತದೆ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಗಡ್ಡೆ ಗೂಳಿ ಬಸವೇಶ್ವರ ಗುಡಿಯಲ್ಲಿ ಆಗಿರುತ್ತದೆ ಎಂದು ಬರೆಸಿರುತ್ತೇನೆ. ಈ ದಾವೆಯಲ್ಲಿ ವಂಶಾವಳಿಯನ್ನು ಸಲ್ಲಿಸಿರುತ್ತೇನೆ. ನಾನು ದಾವೆಯಲ್ಲಿ ವಂಶಾವಳಿ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ತೇಜರಾಜ ಪಾಟೀಲ 1987 ರಲ್ಲಿ ಮೃತಪಟ್ಟಿರುತ್ತಾರೆ. 1973 ರಿಂದ ವಿಜಯಲಕ್ಷ್ಮಿ ದೇವದುರ್ಗ ಸರಕಾರಿ ಆಸ್ಪತ್ರೆಯಲ್ಲಿ ನರ್ಸ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ. ಸದರಿ ಅವಧಿಯಲ್ಲಿ ವಿಜಯಲಕ್ಷ್ಮಿ ದೇವದುರ್ಗದ ಯಾವ ವಿಳಾಸದಲ್ಲಿ ವಾಸವಿದ್ದಳೂ ಎಂಬ ಪಶ್ನೆಗೆ ಸಾಕ್ಷಿ ದಾವ ಆಸ್ತಿಯಲ್ಲಿ ಇದ್ದರು. ತೇಜರಾಜ ಪಾಟೀಲ ಇವರ ಸ್ವತ್ತುಗಳು ಇರುತ್ತವೆ ಮತ್ತು ಅವರು ಅಲ್ಲಿ ವಾಸವಿದ್ದರು ಎಂದರೆ ಸರಿ. ದಾವ ಆಸ್ತಿಯ ಮನೆಯಲ್ಲಿ ತೇಜರಾಜ ಪಾಟೀ ಸವಾಸವಿರುತ್ತಿದ್ದರು ಎಂದರೆ ಸರಿ. ಭಿನ್ನಾಭಿಪ್ರಾಯ ಯಾವಾಗ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಭಿನ್ನಾಭಿಪ್ರಾಯ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿಗೆ ಕೊಪ್ಪರ ಗ್ರಾಮದಲ್ಲಿ 70 ಎಕರೆ ಜಮೀನು ಮತ್ತು ಅದೇ ಗ್ರಾಮದಲ್ಲಿನ 1 ಮನೆಯನ್ನು ತೇಜರಾಜ ಕೊಟ್ಟಿರುತ್ತಾನೆ. ಅವುಗಳ ಸ.ನಂ. ನಿಖರವಾಗಿ

ಹೇಳಲು ಬರುವುದಿಲ್ಲ. ದಾವ ಆಸ್ತಿ 3/2/22 ವಿಜಯಲಕ್ಷ್ಮಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ದೇವದುರ್ಗದಲ್ಲಿ ಮ.ನಂ.13/19 ನ್ನು ವಿಜಯಲಕ್ಷ್ಮಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿ. ಸದರಿ ಮನೆಯನ್ನು 1990 ರಲ್ಲಿ ಬ್ಯಾಂಕಿನಲ್ಲಿ ಸಾಲ ಮಾಡಿ ಮನೆ ಕಟ್ಟಿರುತ್ತೇವೆ. ಸದರಿ ಮನೆ ಕಟ್ಟಿದ ಪ್ಲಾಟನ್ನು ಯಾವಾಗ ಖರೀದಿ ಮಾಡಿಲಾಗಿದೆ ನೆನಪಿಲ್ಲ. ಸದರಿ ಪ್ಲಾಟನ್ನು 1990 ರಲ್ಲಿ ಖರೀದಿ ಮಾಡಲಾಗಿದೆ ಎಂದರೆ ನೆನಪಿಲ್ಲ. ಸದರಿ ಖರೀದಿ ಪತ್ರದಲ್ಲಿ ವಿಜಯಲಕ್ಷ್ಮಿ ತಂದೆ ಯಶವಂತರಾವ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ವಿಜಯಲಕ್ಷ್ಮಿ ತಂದೆ ಹೆಸರು ಯಶವಂತರಾವ ಎಂದು ನಮೂದು ಮಾಡಲು ಕಾರಣವೇನು ಎಂವ ಪ್ರಶ್ನೆಗೆ ಸಾಕ್ಷಿ ಆಸ್ಪತ್ರೆಯಲ್ಲಿ ದಾಖಲಾತಿಗಳಲ್ಲಿ ತಂದೆ ಹೆಸರು ನಮೂದು ಇದುದ್ದರಿಂದ ಗಂಡನ ಹೆಸ ನಮೂದು ಮಾಡದೇ ತಂದ ಹೆಸರು ನಮೂದು ಮಾಡಲಾಗಿದೆ ಎಂದು ನುಡಿಯುತ್ತಾರೆ. ಚುನಾವಣಾ ಗುರುತಿನ ಚೀಟಿಯಲ್ಲಿ ತಂದೆ ಹೆಸರು ಯಾವ ಕಾರಣಕ್ಕೆ ನಮೂದು ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಆಗ ಮದುವೆಯಾಗದ್ದರಿಂದ ಗಂಡನ ಹೆಸರು ನಮೂದು ಮಾಡಲಾಗಿದೆ ಎಂದು ನುಡಿಯುತ್ತಾರೆ.

ತೇಜರಾಜ ಪಾಟೀಲ ಶಾಂತಮ್ಮಳನ್ನು 3 ನೇ ಹೆಂಡತಿ ಎಂದು ಎಲ್ಲಿ ಮತ್ತು ಯಾವ ವರ್ಷ ವಿವಾಹ ಆಗಿರುತ್ತಾರೆ ನನಗೆ ನೆನಪಿಲ್ಲ. ತೇಜರಾಜ ಪಾಟೀಲ ದವನಾಕ್ಷಮ್ಮ ಒಬ್ಬಳನೇ ವಿವಾಹ ಆಗಿರುತ್ತಾನೆ ಎಂದರೆ ಸಾಕ್ಷಿ ವಿಜಯಲಕ್ಷ್ಮಿಗೆ ಮಕ್ಕಳು ಆಗದೇ ಇದುದ್ದರಿಂದ ದವನಾಕ್ಷಮ್ಮಳನ್ನು ವಿವಾಹ ಆಗಿರುತ್ತಾನೆ ಎಂದು ನುಡಿಯುತ್ತಾರೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ. ಶಾಂತಮ್ಮ ಯಾವ ಗ್ರಾಮದಳು ನನಗೆ ಗೊತ್ತಿಲ್ಲ. ಶಾಂತಮ್ಮ ಎಂದು ನಾನು ಹೇಳುತ್ತಿರುವ ಹೆಸರಿನ ವ್ಯಕ್ತಿ ಮುನ್ನಿಬೇಗಂ ಆಗಿರುತ್ತಾಳೆ ಎಂದರೆ ನನಗೆ ಸದರಿ ವ್ಯಕ್ತಿ ಶಾಂತಮ್ಮ ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ವಾಸವಿರುವ ಮನೆಯ ಎದುರು ಮುನ್ನಿಬೇಗಂ ವಾಸವಿದ್ದು ಸದರಿ ಸಂಗತಿ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ ಪಹಣಿಗಳಲ್ಲಿ ಚಂದ್ರಶೇಖರ ಪಾಟೀಲ ಹೆಸರಿನಲ್ಲಿ ಇರುವ ಜಮೀನುಗಳು ತೇಜರಾವ ಪಾಟೀಲ ಎಂದು ಇರುತ್ತದೆ ಎಂದರೆ ಸರಿಯಲ್ಲ. ಚಂದ್ರಶೇಖರ ಪಾಟೀಲ ದಾವೆ 55/2001 ಮೂಲಕ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತೇಜರಾಜ ಪಾಟೀಲ ಕುಟುಂಬದ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.